ಜಾಕೆಟ್ ಧರಿಸಿ, ಶೂ ಕಟ್ಟಿ, ಹೆಗಲುಗಳಿಗೆ ಬ್ಯಾಗ್ ಹಾಕಿಕೊಂಡು, ಗೋಡೆಯಿಂದ ನಕ್ಷೆಯನ್ನು ತೆಗೆದುಕೊಂಡು ಮುಂಜಾನೆ ನಾಲ್ಕು ಗಂಟೆಗೆ ಸಿದ್ಧಿ ವಿನಾಯಕನ ದೇವಸ್ಥಾನಕ್ಕೆ ಹೊರಟೆ.

ನೀನಾಳೊಂದಿಗೆ 'ಸ್ಲಮ್‌ಡಾಗ್ ಮಿಲೇನಿಯರ್' ಫಿಲ್ಮ್ ನೋಡಿದಾಗ 'ಜಯ್ ಹೋ!' ಘೋಷಣೆಯನ್ನು ಕಲಿತಿದ್ದೆ; ಈ ಘೋಷಣೆಯನ್ನು ನನಗೇ ಅರಿವಿಲ್ಲದಂತೆ ಆಗಾಗ ಉಚ್ಚರಿಸುತ್ತೇನೆ. ನಾನು ದೇವಸ್ಥಾನದ ಪೂಜಾರಿಯೊಂದಿಗೆ ಮೊಬೈಲ್ ಮೂಲಕ ಮಾತನಾಡಿದೆ. ಅಲ್ಲಿ ಸ್ನಾನ ಮಾಡುವ ವ್ಯವಸ್ಥೆಯಿದೆ ಎಂದು ತಿಳಿದಿತ್ತು. ನಾನು ಯಾವುದೇ ಪರಿಸ್ಥಿತಿಯಲ್ಲಿ ಬೆಳಿಗ್ಗೆ ಹತ್ತು ಗಂಟೆಗೆ ದೇವಸ್ಥಾನಕ್ಕೆ ಹೋಗಬೇಕಿತ್ತು. ಹನ್ನೊಂದು ಗಂಟೆಗೆ ಪೂಜೆ ಆರಂಭವಾಗುವುದಿತ್ತು.

ಮೇ ತಿಂಗಳು ಆರಂಭವಾಗಿದೆ. ಚಳಿ ಮೆಲ್ಲ ಮೆಲ್ಲನೆ ಮರೆಯಾಗುತ್ತಿದೆ, ಋತುಮಾನ ಮನೋಹರವಾಗಿದೆ. ವನಸ್ಪತಿಯ ತಾಜಾ ಸುವಾಸನೆ ಇಡೀ ವಾತಾವರಣದಲ್ಲಿ ಪರಿಮಳಿಸುತ್ತಿದೆ. ಪಕ್ಷಿಗಳ ಚಿಲಿಪಿಲಿ ಪ್ರತಿಧ್ವನಿಸುತ್ತಿದೆ. ಐದು ತಿಂಗಳ ಶಿಶಿರ ಋತುವಿನ ನಂತರ ಸೂರ್ಯ ಮೋಡಗಳ ಮರೆಯಿಂದ ಹೊರ ಬಂದು ಪೃಥ್ವಿಯನ್ನು ತನ್ನ ಶುಭ್ರ ಶ್ವೇತ ಕಿರಣಗಳಿಂದ ಸುತ್ತುವರೆಯಲು ಆರಂಭಿಸಿದ್ದಾನೆ. ದಿನೇ ದಿನೇ ಸೂರ್ಯ ಇನ್ನಷ್ಟು ಬೆಳಗುತ್ತಿದ್ದಾನೆ. ಮುಂಜಾನೆ ನಾಲ್ಕು ಗಂಟೆಗೇ ಮಂದ ಮಂದ ಬೆಳಕು ಮೂಡುತ್ತಿದೆ. ನಾನು ಸಂತಸದಿಂದ ವೇಗವಾಗಿ ಹೆಜ್ಜೆಗಳನ್ನು ಹಾಕುತ್ತಾ ಉತ್ಸಾಹದಿಂದ ಸಾಗುತ್ತಿದ್ದೇನೆ. ಮಾರ್ಗದಲ್ಲಿ ಸಿಗುವ ಯಾತ್ರಿಕರಿಗೆ ಕೈ ಬೀಸುತ್ತಾ ಅವರನ್ನು ಅಭಿನಂದಿಸುತ್ತಿದ್ದೇನೆ. ಮಾರ್ಗದಲ್ಲಿ ಯಾರಿಗಾದರು ಸಹಾಯ ಬೇಕಾಗಬಹುದೇ ಎಂದು ಎಚ್ಚರಿಕೆಯ ದೃಷ್ಟಿಯನ್ನು ಹರಿಸುತ್ತಾ ಹೋಗುತ್ತಿದ್ದೇನೆ. ಒಂದು ಕಡೆ ಗಾಜಿನ ಚೂರುಗಳು ಬಿದ್ದಿರುವುದನ್ನು ನೋಡಿ, ದಾರಿಹೋಕರ ಕಾಲುಗಳಿಗೆ ಚುಚ್ಚಬಾರದೆಂದು ಅವುಗಳನ್ನೆಲ್ಲಾ ಆಯ್ದು ಕಸದ ಬುಟ್ಟಿಗೆ ಹಾಕಿದೆ.

ಎದುರಿಗೆ ಒಬ್ಬ ವೃದ್ಧ ನಾಯಿಯೊಂದಿಗೆ ನಡೆದು ಬರುತ್ತಿದ್ದಾನೆ. ಬಹುಶಃ ಅವನು ತನ್ನ ನಾಯಿಗೆ ಬೆಳಿಗ್ಗೆಯೇ ವಾಕಿಂಗ್ ಮಾಡಿಸುತ್ತಿದ್ದಾನೆ. ಅವನ ಒಂದು ಕೈಯಲ್ಲಿ ನಾಯಿಯ ಸರಪಳಿ, ಇನ್ನೊಂದು ಕೈಯಲ್ಲಿ ಕೆಲವು ವಸ್ತುಗಳಿವೆ. ಇದ್ದಕ್ಕಿದ್ದಂತೆ ಅವನ ಕೈಯಿಂದ ಒಂದು ಪ್ಯಾಕೆಟ್ ಕೆಳಗೆ ಬಿತ್ತು. ಅವನು ಬಾಗಿ ಅದನ್ನು ತೆಗೆದುಕೊಳ್ಳುವುದಕ್ಕೆ ಮೊದಲೇ ನಾನು ಓಡಿ ಹೋಗಿ, ಬಿದ್ದಿದ್ದ ಪ್ಯಾಕೆಟನ್ನು ಎತ್ತಿ ಅವನಿಗೆ ಕೊಟ್ಟೆ. ಅವನು ನನಗೆ 'ಗಾಡ್ ಬ್ಲೆಸ್ ಯೂ!' ಎಂದು ಆಶೀರ್ವದಿಸಿದ.

ಸ್ವಲ್ಪ ಮುಂದಕ್ಕೆ ಹೋದಾಗ ಅಂಧ ವ್ಯಕ್ತಿಯೊಬ್ಬ ಟ್ರಾಫಿಕ್ ಲೈಟ್ ಬಳಿ ನಿಂತಿದ್ದನ್ನು ನೋಡಿದೆ. ಅವನು ತನ್ನ ಬೆತ್ತದಿಂದ ರಸ್ತೆಯನ್ನು ತಡವುತ್ತಿದ್ದ. ನಾನು ಕೂಡಲೇ ಹೋಗಿ ಅವನ ಕೈಹಿಡಿದು ಅವನನ್ನು ರಸ್ತೆ ದಾಟಿಸಿದೆ.

'ನಿನ್ನನ್ನು ನಾನು ನೋಡಲಾರೆ, ಆದರೆ ನೀನೊಬ್ಬ ಪ್ರಾಮಾಣಿಕ ಎಂಬುದನ್ನು ಅರ್ಥ ಮಾಡಿಕೊಳ್ಳಬಲ್ಲೆ' ಎಂದ ಅವನು.

ಎರಡು ಗಂಟೆಗೆ ಹತ್ತು ಕಿ.ಮೀ. ಕ್ರಮಿಸಿ ಕೋಂಗೆಸಟೀನ್ ರಸ್ತೆಯಿಂದ ಹಾದು ಬೌಸವಿಯಾ ದಾಟಿದೆ. ನಂತರ ವಾಡ್ಸತ್ತುಪವಾಯ್ ರಸ್ತೆ ಹಿಡಿದು ಹರಲೇವ್ ಕಡೆಗೆ ಮುಂದುವರೆದೆ. ವಾಡ್ಸತ್ತುಪವಾಯ್ ಉದ್ದಗಲದ ರಸ್ತೆಯಿದ್ದು ಇಲ್ಲಿ ರೆಸ್ಟೋರೆಂಟ್, ಕೆಫೆ, ಸೂಪರ್ ಮಾರ್ಕೆಟ್ ಮತ್ತು ಅನೇಕ ಆಕರ್ಷಕ ಅಂಗಡಿಗಳು ಪಂಕ್ತಿಬದ್ಧವಾಗಿವೆ. ಅಂಗಡಿಗಳು ತೆರೆಯುತ್ತಿವೆ. ನಿದ್ರಿಸಿದ ನಗರ ಮೆಲ್ಲ ಮೆಲ್ಲನೆ ಜೀವಂತವಾಗುತ್ತಿದೆ. ರಸ್ತೆಯ ಅಂಚಿನಲ್ಲಿ ಮಹಿಳೆಯೊಬ್ಬಳು ತನ್ನ ಕಾರಿನ ಬಳಿ ಚಿಂತಾಕ್ರಾಂತಳಾಗಿ ನಿಂತಿರುವುದನ್ನು ನೋಡಿದೆ. ಬಹುಶಃ ಅವಳ ಕಾರಿನ ಟೈರ್ ಪಂಕ್ಚರ್ ಆಗಿರಬೇಕು, ಅವಳು ಟೈರ್ ಬದಲಾಯಿಸಲು ಸಾಹಸಪಡುತ್ತಿದ್ದಳು. ಇಬ್ಬರು ಮಕ್ಕಳು ಕಾರಿನ ಹಿಂದಿನ ಸೀಟಿನಲ್ಲಿ ಅಳುಮೋರೆ ಹೊತ್ತು ಕೂತಿದ್ದರು. ನಾನು ಅವಳೆಡೆಗೆ ಮುಂದುವರೆದು ಹೋದೆ.

'ಕ್ಯಾನ್ ಐ ಹೆಲ್ಪ್ ಯೂ?' ನಾನು ಶಿಷ್ಟಾಚಾರದಿಂದ ಕೇಳಿದೆ.

'ಪ್ಲೀಸ್' ಎಂದು ಅವಳು ನನ್ನನ್ನು ನೋಡಿದಳು.

ನಾನು ಅವಳ ಕಾರಿನ ಟೈರ್ ಅನ್ನು ಬದಲಿಸಿದೆ. ನಂತರ ಕಾರ್ ಸ್ಟಾರ್ಟ್ ಮಾಡಿ ಹೇಳಿದೆ, 'ರೆಡಿಯಾಯ್ತು ಮೇಡಂ.'

'ಟೂಸಿಂದ್ ಥಕ್ಕ್ — ಸಾವಿರ ಧನ್ಯವಾದಗಳು'. ಆ ಮಹಿಳೆ ಸ್ನೇಹದಿಂದ ನನ್ನ ಕೈ ಹಿಡಿದು ಅನೇಕ ಬಾರಿ ಧನ್ಯವಾದವನ್ನು ಹೇಳಿದಳು.

'ಮೈ ಪ್ಲೆಷರ್' ಎಂದೆ.

ಹೀಗೆ ದಾರಿಹೋಕರಿಗೆ ಸಣ್ಣ ಪುಟ್ಟ ಸಹಾಯವನ್ನು ಮಾಡುತ್ತಾ ಸಾಗುತ್ತಿದ್ದೇನೆ. ಅದರೊಂದಿಗೆ, ಜಯ್ ಹೋ, ಹೆಲುಲುಯಿಯಾ (ಓಹ್ ಗಾಡ್), ಅಮೆನ್ — ಈ ಪವಿತ್ರ ಶಬ್ದಗಳನ್ನು ಜಪಿಸುತ್ತಾ ಸಾಗುತ್ತಿದ್ದೇನೆ.

ಗಡಿಯಾರ ನೋಡಿಕೊಂಡೆ; ಏಳು ಗಂಟೆಯಾಗಿದೆ. ಬಿಸಿ ಪಾನೀಯವನ್ನು ಕುಡಿಯುವ ಬಯಕೆಯಾಗುತ್ತಿದೆ. ಕಡೆಗೆ ಒಂದು ಸ್ಟಾರಬಕ್ಸ್ ಕೆಫೆ ಎದುರಿಗೆ ಕಾಣಬಂತು, ನಾನು ಅಲ್ಲಿಗೆ ಹೋಗಿ ಒಳಗೆ ನುಗ್ಗಿದೆ. ನಾನು ಇಲ್ಲಿಗೆ ಬಹುಶಃ ಮೊದಲ ಗಿರಾಕಿಯಾಗಿದ್ದೆ. ಬೆಳಗಿನ ಬೇಕರಿ ಬನ್ಸ್ ಬ್ರೆಡ್ ಒಲೆಯಲ್ಲಿ ತಯಾರಾಗುತ್ತಿವೆ. ಕೆಟಲ್‌ನಲ್ಲಿ ಕಾಫಿಯನ್ನು ಸೋಸಲಾಗುತ್ತಿದೆ. ಬೆಣ್ಣೆ, ದಾಲ್ಚಿನ್ನಿ ಮತ್ತು ಕಾಫಿಯ ಸಮ್ಮಿಳಿತ ಸುಗಂಧ ನನ್ನ ಮೂಗಿನ ಹೊಳ್ಳೆಗಳಲ್ಲಿ ಕಲೆಯುತ್ತಿದೆ. ನಾನು ಸೋಫಾದಲ್ಲಿ ಕೂರುತ್ತಲೇ ಯುವ ಸೇಲ್ಸ್‌ಗರ್ಲ್ ಬಂದು ತಡೆದಳು, 'ನಾವಿನ್ನೂ ಬಿಜಿನೆಸ್ ಪ್ರಾರಂಭಿಸಿಲ್ಲ'.

'ಪ್ರಾರಂಭಿಸಿ, ಗ್ರಾಹಕ ಎದುರಿಗಿದ್ದಾನೆ' ಎಂದು ಸೋಫಾದಲ್ಲಿ ಆರಾಮಾಗಿ ಕೂತೆ. ಹುಡುಗಿ ಅಸಹಜತೆಯಿಂದ ತನ್ನ ಸಹೋದ್ಯೋಗಿಯನ್ನು ನೋಡಿದಳು, ಅವನು ನನ್ನನ್ನು ನೋಡುತ್ತಾ, 'ಇನ್ನೂ ಏನೂ ಸಿದ್ಧವಾಗಿಲ್ಲ' ಎಂದ.

'ನಾನು ಕಾಯ್ತೀನಿ. ನಾನು ಮುಂಜಾನೆ ನಾಲ್ಕು ಗಂಟೆಗೇ ಮನೆಯಿಂದ ಹೊರಟಿದ್ದೇನೆ. ನನಗೆ ಬಿಸಿ ಕಾಫಿ ಬೇಕು, ಅಷ್ಟೆ. ಪ್ಲೀಸ್' ನಾನು ವಿನಯಪೂರ್ವಕವಾಗಿ ಹೇಳಿದೆ.

'ಹದಿನೈದು ನಿಮಿಷಗಳಾಗುತ್ತೆ' ಎಂದ ಹುಡುಗ. ಇಬ್ಬರೂ ಮುಗುಳ್ನಕ್ಕರು.

'ಪರ್ವಾಗಿಲ್ಲ' ಎಂದೆ.

ಹತ್ತೇ ನಿಮಿಷದಲ್ಲಿ ನನ್ನೆದುರು ಕಾಫಿ ಪ್ರತ್ಯಕ್ಷವಾಯಿತು.

ನಾನು ಕಾಫಿಯನ್ನು ಗುಟುಕರಿಸಲಾರಂಭಿಸಿದೆ. ನೀನಾಳಿಗೆ ಸ್ಟಾರ್‌ಬಕ್ಸ್ ಕಾಫಿ ತುಂಬಾ ಇಷ್ಟವಾಗುತ್ತಿತ್ತು. ನಾವಿಬ್ಬರು ಸಾಮಾನ್ಯವಾಗಿ ಸ್ಟಾರ್‌ಬಕ್ಸ್ ಕಾಫಿ ಹೌಸಿಗೆ ಬರುತ್ತಿದ್ದೆವು. ಕೊನೆಯ ಬಾರಿಗೂ ನಾವು ಸ್ಟಾರ್‌ಬಕ್ಸ್‌ಗೇ ಬಂದಿದ್ದೆವು. ಆಗ ನೀನಾಳ ಆರೋಗ್ಯ ಸರಿಯಿರಲಿಲ್ಲ. ನಂತರದಲ್ಲಿ ಅವಳು ಆಸ್ಪತ್ರೆಗೆ ದಾಖಲಾಗಿದ್ದಳು. ಆಸ್ಪತ್ರೆಯಿಂದ ಹೋಸ್ಪಿಸ್, ಹೋಸ್ಪಿಸ್‌ನಿಂದ ಕ್ರಿಮಿಟೋರಿಯಮ್, ಕ್ರಿಮಿಟೋರಿಯಮ್‌ನಿಂದ... ಓಹ್ ನೀನಾ... ನೀನೆಲ್ಲಿಗೆ ಹೋಗಿಬಿಟ್ಟೆ ನೀನಾ... ಎಲ್ಲಿ ಅದೃಶ್ಯಳಾಗಿಬಿಟ್ಟೆ ನೀನಾ...?

***

### ಭೇಟಿ: ಒಂದು ಸಂಯೋಗ

ನಾನು ನೀನಾಳನ್ನು ಪ್ರಥಮ ಬಾರಿಗೆ ಎಡಿನ್‌ಬರ್ಗ್‌ನಲ್ಲಿ ಹದಿಮೂರು ವರ್ಷಗಳ ಹಿಂದೆ ಭೇಟಿಯಾಗಿದ್ದೆ. ಆದರೆ ನಿನ್ನೆ ಭೇಟಿಯಾದಂತೆ ಅನ್ನಿಸುತ್ತದೆ. ನಾನು ಬೋಂಗೋ ಕ್ಲಬ್ ಕಾರ್ಯಕ್ರಮದಲ್ಲಿ ಎಡಿನ್‌ಬರ್ಗ್ ಡ್ಯಾನ್ಸ್ ಗ್ರೂಪಿನೊಂದಿಗೆ ಸ್ಕಾಟ್ಲೆಂಡಿನ ಪಾರಂಪರಿಕ ಜಾನಪದ ನೃತ್ಯ 'ಸ್ಕಾಟಿಶ್ ಹೈಲ್ಯಾಂಡ್ ನೃತ್ಯ'ವನ್ನು ಪ್ರಸ್ತುತಪಡಿಸುತ್ತಿದ್ದೆ. ಎಲ್ಲಾ ನರ್ತಕರು ವಿಶೇಷವಾದ ಸ್ಕಾಟಿಶ್ ಉಡುಪುಗಳನ್ನು ಧರಿಸಿದ್ದರು. ಹೈಲ್ಯಾಂಡ್ ನೃತ್ಯವನ್ನು ಪ್ರಸ್ತುತಪಡಿಸಲು ಟೆಕ್ನಿಕ್, ತಾಳ್ಮೆ ಮತ್ತು ಶಕ್ತಿಯ ಅವಶ್ಯಕತೆಯಿರುತ್ತದೆ. ಹೈಲ್ಯಾಂಡ್ ನೃತ್ಯ ಒಂದು ಸ್ಪರ್ಧಾತ್ಮಕ ಮತ್ತು ತಾಂತ್ರಿಕತೆಯ ನೃತ್ಯ ರೂಪವಾಗಿದೆ; ಸ್ಕಾಟ್ಲೆಂಡಿನ ಕ್ರೀಡಾ ಪರಿಷದ್ ಮೂಲಕ ಈ ನೃತ್ಯಕ್ಕೆ ಒಂದು ಕ್ರೀಡಾರೂಪದ ಮಾನ್ಯತೆ ದೊರೆತಿದೆ.

ಒಂದು ಭವ್ಯ ರಂಗ ವೇದಿಕೆಯಲ್ಲಿ ಅಭಿಜಾತ ಜನಸಮೂಹದೆದುರು ನೃತ್ಯವನ್ನು ಪ್ರಸ್ತುತಪಡಿಸುವ ನನ್ನ ಮೊದಲ ಅವಕಾಶ ಇದಾಗಿತ್ತು. ನಾನು ಇದುವರೆಗೆ ಸಣ್ಣ ಪುಟ್ಟ ವೇದಿಕೆಗಳಲ್ಲಿ ಮಾತ್ರ ನರ್ತಿಸಿದ್ದೆ. ನನಗೆ ಬೋಂಗೋ ಕ್ಲಬ್‌ನಲ್ಲಿ ಏಕೆ ಪ್ರವೇಶ ಲಭಿಸಿತೆಂದರೆ, ಎಡಿನ್‌ಬರ್ಗ್ ಡ್ಯಾನ್ಸ್ ಗ್ರೂಪಿನ ನರ್ತಕನೊಬ್ಬ ಸೂಕ್ತ ವೇಳೆಗೆ ಅನಾರೋಗ್ಯಕ್ಕೆ ಒಳಗಾದ. ಹೀಗಾಗಿ ಒಬ್ಬರ ಶಿಫಾರಸ್ಸಿನಿಂದಾಗಿ ಅವನ ಪಾತ್ರ ನನಗೆ ಲಭಿಸಿತು.

ಇಂದು ನನ್ನೆದುರು ಜಗತ್ತಿನ ನಿಜವಾದ ಪ್ರೇಕ್ಷಕರಿದ್ದರು. ನನ್ನಲ್ಲಿ ಉತ್ಸಾಹದೊಂದಿಗೆ ಭಯವೂ ಆವರಿಸಿತ್ತು. ಪ್ರೇಕ್ಷಕರು ಸಾಕಷ್ಟು ದುಬಾರಿ ಟಿಕೆಟ್‌ಗಳನ್ನು ಖರೀದಿಸಿದ್ದರು. ನಾವು ಅವರ ಅಪೇಕ್ಷೆಗಳಿಗೆ ಸೂಕ್ತವಾಗಿ ಸ್ಪಂದಿಸಬೇಕಿತ್ತು. ಪ್ರೇಕ್ಷಕರಲ್ಲಿ ನೀನಾ ಸಹ ಇದ್ದಳು. ಅವಳು ಪ್ರಶಂಸನೀಯ ದೃಷ್ಟಿಯಿಂದ ನಮ್ಮನ್ನೇ ನೋಡುತ್ತಿದ್ದಳು.

(ಸಶೇಷ)